ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

5


ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE : 24/7/2020

# ಇ–ಪಾವತಿಗೆ ಕಾಯ್ದೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ 24-7-2020

**ಬೆಂಗಳೂರು:** ಇನ್ನು ಮುಂದೆ ನ್ಯಾಯಾಲಯಗಳಲ್ಲಿ ಮುದ್ರಾಂಕ ಶುಲ್ಕ ಮತ್ತು ನ್ಯಾಯಾಲಯ ಶುಲ್ಕಗಳನ್ನು ಆನ್‌ಲೈನ್ (ಇ–ಪೇಮೆಂಟ್) ಮೂಲಕ ಪಾವತಿ ವ್ಯವಸ್ಥೆ ಜಾರಿ ತರುವ ಉದ್ದೇಶದ ತಿದ್ದುಪಡಿ ಸುಗ್ರೀವಾಜ್ಞೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.



ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾಯಾಲಯಗಳು ಈ ಸಂಬಂಧ ಕೋರಿಕೆ ಸಲ್ಲಿಸಿದ್ದರಿಂದ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಸುಮಾರು 7,000 ನವೋದ್ಯಮಗಳಿವೆ. ಈವರೆಗೆ ಟೆಕ್ನಾಲಜಿ ಮಿಷನ್ ವ್ಯಾಪ್ತಿಯಲ್ಲಿದ್ದವು. ಮೂರರಿಂದ ನಾಲ್ಕು ಏಜೆನ್ಸಿಗಳು ಉಸ್ತುವಾರಿ ಹೊಂದಿದ್ದವು. ಹೊಸದಾಗಿ 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್' ಎಂಬ ಸಂಸ್ಥೆ ಮಾಡಿ ನವೋದ್ಯಮಗಳನ್ನು ಅದರ ಅಡಿ ತರಲಾಗುವುದು. ಇದರಲ್ಲಿ ರಾಜ್ಯ ಸರ್ಕಾರ ಶೇ 49 ರಷ್ಟು ಷೇರುಗಳನ್ನು ಮತ್ತು ಸಂಘ ಸಂಸ್ಥೆಗಳು ಶೇ 51 ರಷ್ಟು ಷೇರುಗಳನ್ನು ಹೊಂದಿರಲಿವೆ ಎಂದು ಹೇಳಿದರು.

- ಎಸಿಬಿ ಕೇಡರ್ ನೇಮಕಾತಿಗೆ ಒಪ್ಪಿಗೆ, ನಿಯೋಜನೆ ಆಧಾರದಲ್ಲಿ ನೇಮಕ ಮಾಡುವ ನಿಯಮಾವಳಿಗೆ ಅಸ್ತು
- ಕೆಎಸ್‌ಎಫ್‌ಸಿ ಸಾಲದ ಮೇಲಿನ ಬಡ್ಡಿ ದರ ಶೇ 10 ರಿಂದ ಶೇ 6 ಇಳಿಕೆ ಮತ್ತು ಸಂಸ್ಥೆಗೆ ₹150 ಕೋಟಿ ಸಾಲಕ್ಕೆ ಖಾತರಿ
- ಪಿಂಚಣಿ, ಸಣ್ಣ ಉಳಿತಾಯ ಇಲಾಖೆ ವಿಲೀನಗೊಳಿಸಿ ಖಜಾನೆ ಆಯುಕ್ತಾಲಯ ಆರಂಭಿಸಲು ತೀರ್ಮಾನ
- ಡ್ರಗ್ಸ್ ಮತ್ತು ಲಾಜಿಸ್ಟಿಕ್ಸ್ ಸೊಸೈಟಿಯನ್ನು ಪ್ರತ್ಯೇಕ ನಿಗಮ ಮಾಡಲು ಅನುಮೋದನೆ
- ನಗರ ಪ್ರದೇಶಗಳಲ್ಲಿ ರೈಲು ನಿಲ್ದಾಣಗಳಂತಹ ಪ್ರಮುಖ ಸ್ಥಳಗಳ ಭೂಮಿಯ ಪ್ರೀಮಿಯಂ ಮೊತ್ತ ಹೆಚ್ಚಿಸಲು ನಗರ ಯೋಜನಾ ಕಾಯ್ದೆಗೆ ತಿದ್ದುಪಡಿಗೆ ಒಪ್ಪಿಗೆ
- ಮಡಿಕೇರಿಯಲ್ಲಿರುವ ಅರಮನೆ ಮತ್ತು ಕೋಟೆಯನ್ನು ನವೀಕರಿಸಿ ಭಾರತೀಯ ಪುರಾತತ್ತ್ವ ಇಲಾಖೆಗೆ ಹಸ್ತಾಂತರ.